**ಪಾಠ–11** **ಸೆಪ್ಟೆಂಬರ್ 7–13**

# ಕ್ರಿಸ್ತಾಗಮನ ನಿರೀಕ್ಷೆಯನ್ನು ಜೀವಿಸುವುದು



**ಈ ವಾರದ ಪಾಠಗಳಿಗೆ ಓದಿರಿ :** ಲೂಕ 18:1–8, ಮತ್ತಾಯ 24–25 ಮತ್ತು 1 ಕೊರಿಂಥ 15:12–19, ಪ್ರಸಂಗಿ 8:14, ಪ್ರಸಂಗಿ 12:13,14; ಪ್ರಕಟನೆ 21:1–5 ಮತ್ತು 22:1–5.

**ಸ್ಮರಣವಾಕ್ಯ : ಆದ್ದರಿಂದ ನನ್ನ ಪ್ರಿಯ ಸಹೋದರರೇ, ಸ್ಥಿರ ಚಿತ್ತರಾಗಿಯೂ, ನಿಶ್ಚಲರಾಗಿಯೂ ಇರಿ. ನೀವು ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವುದಿಲ್ಲವೆಂದು ತಿಳಿದು ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸಕ್ತಿಯಿಂದ ಮಾಡುವವರಾಗಿರಿ (1 ಕೊರಿಂಥ 15:58).**

ಇಂದು ಯೇಸುಕ್ರಿಸ್ತನು ಪರಲೋಕವನ್ನು ವಾಸ್ತಾವೆಂದು ಪ್ರಕಟಿಸುತ್ತಾನೆ. ನಾವು ಅದರ ಭಾಗವಾಗಿದ್ದೇವೆ. ಆತನು ತನ್ನ ಶಿಷ್ಯರಂತಹ ಹಾಗೆಯೇ ಪ್ರಕಟಿಸಬೇಕೆಂದು ಅವರನ್ನು ಲೋಕಕ್ಕೆ ಕಳುಹಿಸಿದನು. ಶಿಷ್ಯರು ತಾವೇನು ಪಡೆದುಕೊಂಡಿದ್ದರೋ ಅದನ್ನು ಉಚಿತವಾಗಿ ಇತರರಿಗೆ ಹಂಚಿಕೊಡುತ್ತಾ ಸುವಾರ್ತೆಯನ್ನು ಸಾರುತ್ತಾ ಜನರ ಸೇವೆ ಮಾಡುತ್ತಾ ಪರಲೋಕದ ಜೀವಿತವನ್ನು ಇಲ್ಲಿ ಜೀವಿಸಬೇಕಾಗಿತ್ತು (ಮತ್ತಾಯ 10:5–8).

ಯೇಸುಕ್ರಿಸ್ತನಿಗೆ ತನ್ನ ರಾಜ್ಯವು ಭಿನ್ನವಾದದೆಂದು ಚೆನ್ನಾಗಿ ತಿಳಿದಿತ್ತು (ಯೋಹಾನ 18:36). ಅದು ಪೂರ್ಣವಾಗಿ ಬರಬೇಕಾಗಿದೆ. ತನ್ನ ನರಾವತಾರ, ಸೇವೆ, ಮರಣ ಮತ್ತು ಪುನರುತ್ಥಾನದಿಂದ ಯೇಸುವು ದೇವರ ರಾಜ್ಯವನ್ನು ಉದ್ಘಾಟಿಸಿದನು ಮತ್ತು ಈ ಲೋಕದ ರಾಜ್ಯವನ್ನು ಪೂರ್ಣವಾಗಿ ತನ್ನ

ರಾಜ್ಯದಿಂದ ಸ್ಥಳಾಂತರಿಸಲು ಮುಂದೆ ದೃಷ್ಟಿಯಿಟ್ಟನು. ದೇವರ ಆಳ್ವಿಕೆಯು ಇದನ್ನು ಪೂರ್ಣಗೊಳಿಸುತ್ತದೆ.

ಅಡ್ವೆಂಟಿಸ್ಟರು ಇದರ (ದೇವರರಾಜ್ಯ) ವಾಸ್ತವತೆಗೆ ಕಾದುಕೊಂಡಿರುವ ನಿರೀಕ್ಷೆಯುಳ್ಳ ಜನರು ಎಂದು ವ್ಯಾಖ್ಯಾನಿಸಬಹುದು. ಈ ನಿರೀಕ್ಷೆಯು ಮುಂದಿನ ಹೊಸಲೋಕವನ್ನು ಮಾತ್ರವೇ ಕುರಿತದ್ದಲ್ಲ. ನಿರೀಕ್ಷೆಯು ಮುಂದಿನದನ್ನು ನೋಡುವಂಥದ್ದಾಗಿರುವಾಗಲೇ ನಿರೀಕ್ಷೆಯು ಈಗಿನದನ್ನು ಬದಲಾಯಿಸುವುದನ್ನು ನೋಡುತ್ತದೆ. ಅಂತಹ ನಿರೀಕ್ಷೆಯಿಂದ ನಾವು ಭವಿಷ್ಯದಲ್ಲಿ ಜೀವಿಸುವಂತೆ ವರ್ತಮಾನದಲ್ಲೂ ಜೀವಿಸಬೇಕು. ಹಾಗೆ ಜೀವಿಸುತ್ತಾ ಒಂದು ದಿನ ಮುಂದಿನ ಲೋಕವು ಹೇಗಿರಬೇಕೆಂದು ಬಯಸುತ್ತೇವೆಯೋ ಅದಕ್ಕೆ ತಕ್ಕ ಕಾರ್ಯಗಳನ್ನು ಮಾಡತೊಡಗಬೇಕು.

ಈ ಪಾಠದ ಅಧ್ಯಯನವನ್ನು ಸೆಪ್ಟೆಂಬರ್ 14 ರ ಸಬ್ಬತ್ತಿಗೆ ಮಾಡಿಕೊಳ್ಳಿರಿ.

**ಭಾನುವಾರ** **ಸೆಪ್ಟೆಂಬರ್ 8**

## ಇನ್ನೆಷ್ಟು ಕಾಲ ಕರ್ತನೇ?

ಸತ್ಯವೇದದ ಕಥೆಗಳುದ್ದಕ್ಕೂ ದಾಸತ್ವ, ಗಡಿಪಾರು ತುಳಿತ, ಬಡತನ ಅಥವಾ ಅನ್ಯಾಯ ಅಥವಾ ದುರಂತಗಳನ್ನನುಭವಿಸುವವರು ಸಹಾಯಕ್ಕಾಗಿ ದೇವರು ಮೊರೆಯಿಡುವುದನ್ನು ನೋಡುತ್ತೇವೆ. ಐಗುಪ್ತದಲ್ಲಿದ್ದ ಇಸ್ರಾಯೇಲ್ ದಾಸರು (ಗುಲಾಮರು) ಬ್ಯಾಬಲೋನಿನಲ್ಲಿದ್ದ ಸೆರೆಯಾಳುಗಳು ತಮ್ಮ ಬವಣೆಗಳ ನೋಡಬೇಕೆಂದು ದೇವರಿಗೆ ಮೊರೆಯಿಟ್ಟರು. ಅದಕ್ಕೆ ದೇವರು ಕಾರ್ಯೋನ್ಮುಖನಾಗಿ ತನ್ನ ಜನರನ್ನು ಪಾರುಮಾಡಿ ಅನ್ಯರುಗಳ ಪುನರ್‌ಸ್ಥಾಪನೆ ಮಾಡಿದ ಅನೇಕ ಉದಾಹರಣೆ ಸತ್ಯವೇದದಲ್ಲಿ ಕೊಡಲ್ಪಟ್ಟಿವೆ. ಕೆಲವು ಸಂದರ್ಭಗಳಲ್ಲಿ ದೇವರು ತನ್ನ ಜನರ ವೈರಿಗಳಿಗೆ ಪ್ರತೀಕಾರ ಮಾಡಿದ್ದನ್ನು ನೋಡುತ್ತೇವೆ.

ಅನೇಕ ಸಲ ದೇವರ ಈ ಹಸ್ತಕ್ಷೇಪವು ಅಲ್ಪಕಾಲದ್ದಾಗಿರುತ್ತವೆ ಮತ್ತು ಬೇರೆ ಬೇರೆ ಪ್ರವಾದಿಗಳು ದೇವರ ಅಂತಿಮ ಹಸ್ತಕ್ಷೇಪದ ಕಡೆಗೆ ಗಮನ ಸೆಳೆಯುತ್ತಾರೆ. ಆವಾಗ ದೇವರು ದುಷ್ಟತ್ವವನ್ನು ಸಂಪೂರ್ಣವಾಗಿ ತೆಗೆದುಹಾಕಿ

ತುಳಿತಕ್ಕೊಳಗಾದವರನ್ನು ರಕ್ಷಿಸುತ್ತಾನೆ. ಅದೇ ಸಂದರ್ಭದಲ್ಲಿ ಪ್ರವಾದಿಗಳು "ಇನ್ನೆಷ್ಟು ಕಾಲ ಓ ಕರ್ತನೇ?" ಎಂದು ಮೊರೆಯಿಡತೊಡಗುತ್ತಾರೆ. ಉದಾಹರಣೆಗೆ ಕರ್ತನ ದೂತನು ಇಸ್ರಾಯೇಲ್ಯರ ಗಡಿಪಾರನ್ನು ಕುರಿತು "ಸೇನಾಧೀಶ್ವರ ಯೆಹೋವನೇ, ನೀನು ಎಪ್ಪತ್ತು ವರುಷಗಳಿಂದ ರೋಷಗೊಂಡಿರುವ ಯೆರೂಸಲೇಮು ಮೊದಲಾದ ಯೆಹೂದ ಪಟ್ಟಣಗಳನ್ನು ಎಷ್ಟು ಕಾಲ ಕರುಣಿಸದೆ ಇರುವಿ" (ಜೆಕರ್ಯ 1:12) ಎಂದು ಮೊರೆಯಿಟ್ಟರು.

ದುಷ್ಟರು ಅಭಿವೃದ್ಧಿ ಹೊಂದಿ ಒಳ್ಳೆಯದನ್ನು ಅನುಭವಿಸುವಾಗ ಭಕ್ತರು ತಮ್ಮ ಕಷ್ಟ ಹಿಂಸೆ ನಷ್ಟಗಳಿಗಾಗಿ ಪ್ರಲಾಪಿಸುವುದನ್ನು ಕೀರ್ತನೆಗಳಲ್ಲಿ ನೋಡುತ್ತೇವೆ (ಕೀರ್ತನೆ 94:3–7).

ನ್ಯಾಯಾದಿಪತಿಯಾದ ದೇವರು ತನ್ನ ಭಕ್ತರ ನ್ಯಾಯುವನ್ನು ಸ್ಥಾಪಿಸುವವನಾಗಿರುವುದರಿಂದ ಅನ್ಯಾಯವು ದೀರ್ಘಕಾಲ ಬಾಳುವುದು ಬಹಳ ಕಷ್ಟವಾಗಿದೆ. ದೇವಜನರು ಯಾವಾಗಲು ಈ ಲೋಕದಲ್ಲಿರುವ ದುಷ್ಟತ್ವದ ವಿಷಯದಲ್ಲಿ ಅಸಹನೆಯುಳ್ಳವರಾಗಿರುತ್ತಾರೆ. ದೇವರು ಕೂಡಲೆ ದುಷ್ಟತ್ವವನ್ನು ತೆಗೆದು ಹಾಕದಿರುವುದು ಅಸಹನೆಗೆ ಮೂಲಕಾರಣವಾಗಿದೆ.

ಹಾಗಾಗಿ ಕೆಲವು ಸಲ ಪ್ರವಾದಿಗಳ ಕಠಿಣ ಪ್ರಶ್ನೆಗಳು ಯೆಹೋವನೇ ನಾನು, ಮೊರೆಯಿಡುತ್ತಿದ್ದರೂ ನೀನು ಎಷ್ಟು ಕಾಲ ಕೇಳದೇ ಇರುವಿ. ಹಿಂಸೆ ಹಿಂಸೆ ಎಂದು ಕೂಗಿಕೊಂಡರೂ ರಕ್ಷಿಸದೆ ಇರುವಿ ಇದೇ ಬಗೆಯ ಒಂದು ಮೊರೆಯು ಹೊಸ ಒಡಂಬಡಿಕೆಯಲ್ಲಿ ಏರಿ ಬರುತ್ತದೆ, ಇಡೀ ಲೋಕವು ದೇವರು ಪಾರು ಮಾಡಿ ಪುನರ್ ಸೃಷ್ಟಿ ಗೈಯ್ಯಲೆಂದು ಇಡೀ ಲೋಕವು ನರಳುತ್ತಿದೆಯೆಂದು ಚಿತ್ರಿತವಾಗಿದೆ (ರೋಮ 8:19–22).

ಒಡೆಯನೇ ಪರಿಶುದ್ಧನೂ, ಸತ್ಯವಂತನೂ ಆಗಿರುವಾತನೆ.... ನೀನು ಎಷ್ಟು ಕಾಲದವರೆಗೆ ನ್ಯಾಯ ವಿಚಾರಿಸಿದೆಯೂ ಪ್ರತಿ ದಂಡನೆ ಮೂಡದೆಯೂ ಇರುವಿ" ಎಂದು ಮಹಾಶಬ್ದದಿಂದ ಕೂಗಿದರು. ಪ್ರಕ 6:10 ಈ ಮೊರೆಯು ಹುತಾತ್ಮರಾದವರ ಪರವಾಗಿ ಏರಿ ಬಂದ ಮೊರೆಯಾಗಿದೆ. ಇದೇ ಮೊರೆಯು ಹಿಂಸೆಗೊಳಗಾದವರ ಮತ್ತು ಬಾಧಿತರ ಪರವಾಗಿ ದೇವರು ಮಧ್ಯೆ ಬರಬೇಕೆಂದು ಏರಿಬಂದಿದೆ.

ಲೂಕ 18:1–8ನ್ನು ಓದಿರಿ. ತನ್ನ ಜನರ ಪ್ರಾರ್ಥನೆ ವಿಜ್ಞಾಪನೆಗಳನ್ನು ಕೇಳಿ ಅವರ ಪರವಾಗಿ ಕಾರ್ಯಮಾಡುವ ದೇವರ ಬಗ್ಗೆ ಕ್ರಿಸ್ತನು ಹೇಳುವುದೇನು? ಇದು ಹೇಗೆ ನಂಬಿಕೆಯ ಅವಶ್ಯಕತೆಗೆ ಸಂಬಂಧಪಟ್ಟಿದೆ?

**ಸೋಮವಾರ** **ಸೆಪ್ಟೆಂಬರ್ 9**

## ಒಂದು ಬಗೆಯ ನಿರೀಕ್ಷೆ

ಧರ್ಮವು ವಿಶ್ವಾಸಗಳನ್ನು ಇಲ್ಲಿನ ಜೀವಿತದಿಂದ ಮುಂದಿನ ಉತ್ತಮ ಜೀವಿತಕ್ಕೆ ಸೆಳೆಯುವ ಪ್ರವೃತ್ತಿಯುಳ್ಳವ ಪುನಃ ಪುನಃ ಬೇರೊಂದು ರಾಜ್ಯಕ್ಕೆ ಗಮನ ಹರಿಸುವಂತೆ ಮಾಡುವುದು ಪವಿತ್ರವಾದ ಪಲಾಯನವಾದವೆಂದು ಅದನ್ನು ನಂಬುವವರನ್ನು ಲೋಕಕ್ಕೂ, ಸಮುದಾಯಕ್ಕೂ ಅಲ್ಪ ಉಪಯುಕ್ತರನ್ನಾಗಿ ಮಾಡುತ್ತದೆಯೆಂಬುದೇ ಅದರ ಮೇಲಿನ ಟೀಕೆ. ಅನೇಕ ವೇಳೆ ವಿಶ್ವಾಸಿಗಳು ಅಂತಹ ಟೀಕೆಗೆ ತಮ್ಮನ್ನು ತಾವೇ ಮುಕ್ತವಾಗಿ ಒಡ್ಡಿಕೊಳ್ಳುತ್ತಾರೆ, ಕೆಲವು ವೇಳೆ ಶ್ರಮಪಡುತ್ತಾರೆ, ಬೋಧಿಸುತ್ತಾರೆ ಮತ್ತು ಇದೇ ರೀತಿಯ ಧೋರಣೆಯನ್ನು ಅಭ್ಯಾಸಿಸುತ್ತಾರೆ.

ಬಡವರಿಗೆ ಮತ್ತು ತುಳಿತಕ್ಕೊಳಗಾದವರಿಗೆ ಸುಮ್ಮನೆ ತಮ್ಮ ದುಃಸ್ಥಿತಿಯನ್ನು ಒಪ್ಪಿಕೊಂಡು ಜೀವಿಸಬೇಕು. ಕ್ರಿಸ್ತನು ತಿರುಗಿ ಬಂದಾಗ ಎಲ್ಲವೂ ಸರಿ ಮಾಡಲ್ಪಡುತ್ತದೆ ಎಂದು ಅಧಿಕಾರದಲ್ಲಿರುವವರು ಹೇಳುವ ಅನೇಕ ಭಯಂಕರವಾದ ಉದಾಹರಣೆಗಳಿವೆ.

ಹೌದು ನಮ್ಮ ಲೋಕವು ಬಿದ್ದುಹೋದ, ಮುರಿದು ಹೋದ ಮತ್ತು ದುರಂತಮಯವಾದ ಸ್ಥಳವಾಗಿದೆ. ಹಾಗಾಗಿ ದೇವರು ಬಂದು ಇವನ್ನೆಲ್ಲಾ ಸರಿಪಡಿಸಬೇಕೆಂದು ಬಯಸುವುದರಲ್ಲಿ ಯಾವ ತಪ್ಪೂ ಇಲ್ಲ. ಆವಾಗ ಆತನು ದುಃಖ, ನೋವು ಅನ್ಯಾಯಗಳನ್ನು ಕೊನೆಗಾಣಿಸುತ್ತಾನೆ. ಆವಾಗ ಈಗಿನ ಲೋಕದ ಅವ್ಯವಸ್ಥೆಯನ್ನು ತೆಗೆದುಹಾಕಿ ಮಹಿಮೆಯುಳ್ಳ, ನೀತಿಯುಳ್ಳ ರಾಜ್ಯವನ್ನು ಸ್ಥಾಪಿಸುತ್ತಾನೆ. ಆ ಭರವಸೆ ಇಲ್ಲದಿದ್ದರೆ, ಆ ವಾಗ್ದಾನವಿಲ್ಲದಿದ್ದರೆ ನಮಗೆ ನಿರೀಕ್ಷೆಯೆಂಬುದೇ ಇರುವುದಿಲ್ಲ.

ಲೋಕದ ಅಂತ್ಯಕಾಲದ ಪ್ರಸಂಗದಲ್ಲಿ (ಮತ್ತಾಯ 24 ಮತ್ತು 25ನ್ನು ನೋಡಿರಿ). ಯೇಸು ಪ್ರಸಂಗದ ಮೊದಲ ಅರ್ಧಭಾಗದಲ್ಲಿ ಅದರಿಂದ

ತಪ್ಪಿಸಿಕೊಳ್ಳುವ ಅವಶ್ಯಕತೆಯನ್ನು ಹೇಳುತ್ತಾನೆ. ಆ ದಿನಗಳನ್ನು ಕಡಿಮೆ ಮಾಡದಿದ್ದರೆ ಒಂದು ನರ ಪ್ರಾಣಿಯಾದರೂ ಉಳಿಯದು ಎಂದು ಹೇಳುತ್ತಾನೆ (ಮತ್ತಾಯ 24:22). ಇದು ದೇವರ ಮಹತ್ವದ ವಾಗ್ದಾನಗಳಿಗೆ ಅವನ ನೀಡುವ ವಿವರಣೆಯ ಆರಂಭವಾಗಿದೆ. ನಾವು ಕೇವಲ ಪಲಾಯನದ ಬಗ್ಗೆ ದೃಷ್ಟಿ ಹರಿಸಿದರೆ ಕ್ರಿಸ್ತನು ಹೇಳುವ ಅನೇಕ ಆಳವಾದ ಅಂಶಗಳು ತಪ್ಪಿಹೋಗುತ್ತವೆ.

ಮತ್ತಾಯ 24 ಮತ್ತು 25 ಅಧ್ಯಾಯಗಳನ್ನು ಓದಿರಿ. ಯೇಸುಕ್ರಿಸ್ತನ ಈ ಪ್ರಸಂಗದಲ್ಲಿರುವ ಮುಖ್ಯವಾದ ಅಂಶಗಳಾವುವು? ಆತನ ಬರೋಣವನ್ನು ಕಾಯುವವರಾದ ನಾವು ಹೇಗೆ ಜೀವಿಸಬೇಕೆಂದು ಯೇಸು ಹೇಳುವುದನ್ನು ಹೇಗೆ ಸಂಕ್ಷೇಪಿಸುವಿರಿ?

ಭವಿಷ್ಯದಲ್ಲಿ ನಾವು ಹೇಗೆ ಜೀವಿಸುತ್ತೇವೆ ಎಂಬ ನಂಬಿಕೆಯು ಈವಾಗ ಹೇಗೆ ಜೀವಿಸಬೇಕು ಎಂಬುದರ ಮೇಲೆ ಪರಿಣಾಮ ಬೀರುತ್ತದೆ.

ಲೋಕದ ಭವಿಷ್ಯದ ಬಗ್ಗೆ ದೇವರು ಕೊಟ್ಟಿರುವ ವಾಗ್ದಾನಗಳ ಮೇಲಿನ ಆರೋಗ್ಯಕರ ಭರವಸೆಯು ಬಲಯುತವಾಗಿ ತೊಡಗಿಸಿಕೊಳ್ಳಲು ಒಂದು ಉತ್ತೇಜಕವಾಗಿರಬೇಕು. ಮತ್ತೊಬ್ಬರ ಜೀವಿತದಲ್ಲಿ ವ್ಯತ್ಯಾಸ ಉಂಟುಮಾಡುವ ಸಂಪದ್ಭರಿತವಾದ ಮತ್ತು ಆಳವಾದ ಜೀವಕ್ಕೆ ಕಿಡಿಯಾಗಿದೆ.

ಕೊರತೆಯಲ್ಲಿ ಬಿದ್ದವರಿಗೆ ಸಹಾಯ ಮಾಡುವ ಸಂದರ್ಭದಲ್ಲಿ ಯೇಸುಕ್ರಿಸ್ತನ ಬರೋಣದ ವಾಗ್ದಾನ ಮತ್ತು ನಿರೀಕ್ಷೆ ನಮ್ಮ ಜೀವಿತದ ಮೇಲೆ ಯಾವ ಪರಿಣಾಮವನ್ನು ಬೀರಬಲ್ಲದು ಮತ್ತು ಬೀರಬೇಕು?

**ಮಂಗಳವಾರ** **ಸೆಪ್ಟೆಂಬರ್ 10**

## ಪುನರುತ್ಥಾನದ ನಿರೀಕ್ಷೆ

ಯೇಸುವಿನ ಎರಡನೆಯ ಆಗಮನದ ಕ್ರೈಸ್ತ ನಿರೀಕ್ಷೆಯೆಂಬುದು ಕೇವಲ ಪ್ರಕಾಶಮಾನವಾದ ಭವಿಷ್ಯವನ್ನು ಎದುರು ನೋಡುವಂಥದಲ್ಲ. ಆದಿಕ್ರೈಸ್ತರಿಗೆ ಯೇಸುಕ್ರಿಸ್ತನ ದೈಹಿಕ ಪುನರುತ್ಥಾನವು ಆತನ ಬರೋಣದ ವಾಗ್ದಾನಕ್ಕೆ ಒಂದು ಗಟ್ಟಿಯಾದ ವಾಸ್ತವವಾಗಿದೆ. ಆತನು ಸತ್ತು ಎದ್ದು ಬರುವುದಾದರೆ ಪಾಪವನ್ನು ಮತ್ತು ಅದರ ದುಷ್ಪರಿಣಾಮಗಳನ್ನು ತೆಗೆದುಹಾಕುವ ಯೋಜನೆಯನ್ನು

ಪೂರ್ಣಗೊಳಿಸಲು ಮತ್ತು ಲೋಕವನ್ನು ನವೀಕರಿಸಲು ಖಂಡಿತವಾಗಿ ಹಿಂದಿರುಗಿ ಬರುತ್ತಾನೆ (1 ಕೊರಿಂಥ 15:22,23ನ್ನು ನೋಡಿರಿ).

ಅಪೋಸ್ತಲ ಪೌಲನಿಗೆ ಯೇಸುವಿನ ಪುನರುತ್ಥಾನವು ಆತನ ಪುನರಾಗಮನದ ನಿರೀಕ್ಷೆಗೆ ಪ್ರಮುಖವಾದ ಅಂಶವಾಗಿದೆ. ಆತನು ತಾನು ಬೋಧಿಸಿದ ಪ್ರತಿಯೊಂದರ ವಿಶ್ವಾಸಾರ್ಹತೆಯನ್ನು ಪಣಕ್ಕೊಡ್ಡಲು ಸಿದ್ಧವಾಗಿದ್ದಾನೆ. ಕ್ರಿಸ್ತನು ಎದ್ದು ಬರಲಿಲ್ಲವಾದರೆ ನಿಮ್ಮ ನಂಬಿಕೆಯು ನಿಷ್ಪ್ರಯೋಜನವಾಗಿದೆ (1 ಕೊರಿಂಥ 15:17).

ಇಲ್ಲಿರುವ ವಾಕ್ಯವನ್ನು ಕುರಿತು ಆಲೋಚಿಸಿರಿ ಕ್ರಿಸ್ತನ ಬರೋಣದ ನಿರೀಕ್ಷೆಯುನ್ನಿಟ್ಟುಕೊಂಡವರಿಗೆಲ್ಲಾ ಆತನ ಪುನರುತ್ಥಾನವು ಎಷ್ಟು ಪ್ರಾಮುಖ್ಯವಾಗಿದೆ?

1 ಕೊರಿಂಥ 15:12–19ನ್ನು ಓದಿರಿ. ಆಸಕ್ತಿಯುಳ್ಳ ಅವಿಶಾಸಿಗೆ ಪುನರುತ್ಥಾನದ ಸತ್ಯವು ಕ್ರೈಸ್ತೀಯ ನಿರೀಕ್ಷೆಗೆ ಬಹಳ ಪ್ರಮುಖವಾದುದೆಂದು ಹೇಗೆ ವಿವರಿಸುವಿರಿ?

ಕ್ರಿಸ್ತನ ಪುನರುತ್ಥಾನವು ಅದಕ್ಕೆ ಸಾಕ್ಷಿಯಾಗಿದ್ದು ಮೊದಲ ಶಿಷ್ಯರನ್ನು ಪರಿವರ್ತನೆ ಮಾಡಿತು. ಯೇಸುಕ್ರಿಸ್ತನು ಹಿಂದೆ ಅವರನ್ನು ದೇವರ ರಾಜ್ಯವನ್ನು ಸಾರುವುದಕ್ಕೆ ಕಳುಹಿಸಿದ್ದನು (ಮತ್ತಾಯ 10;5–8ನ್ನು ನೋಡಿರಿ). ಆದರೆ ಯೇಸುವಿನ ಮರಣವು ಅವರ ಧೈರ್ಯವನ್ನು ಛಿದ್ರಛಿದ್ರ ಮಾಡಿತು ಮತ್ತು ಅವರ ನಿರೀಕ್ಷೆಯನ್ನು ನಾಶಮಾಡಿತು. ಅವರಿಗೆ ಮಹಾ ಆದೇಶವು (ಮತ್ತಾಯ 28:18–20). ಪುನರುತ್ಥಾನವಾದ ಯೇಸು ಕ್ರಿಸ್ತನಿಂದ ಕೊಡಲ್ಪಟ್ಟಿತು ಮತ್ತು ಪವಿತ್ರಾತ್ಮನಿಂದ ಬಲಗೊಂಡಿತು (ಅ.ಕೃ. 2:1–4). ಕ್ರಿಸ್ತನು ಸ್ಥಾಪನೆ ಮಾಡಿದ್ದ ರಾಜ್ಯವನ್ನು ಜೀವಿಸುವುದಕ್ಕೂ ಲೋಕವನ್ನು ಬದಲಾಯಿಸುವ ಮಾರ್ಗದಲ್ಲಿ ತಮ್ಮನ್ನು ನಡೆಸುವುದಕ್ಕೂ ಸಾಧ್ಯವಾಯಿತು.

ಆದಿಕ್ರೈಸ್ತರು ಮರಣದ ಭಯದಿಂದ ವಿಮುಕ್ತರಾಗಿ ಯೇಸುಕ್ರಿಸನ ಹೆಸರನ್ನು ಜೀವಿಸುತ್ತಾ ಧೈರ್ಯದಿಂದ ಪ್ರಸಿದ್ಧಿಪಡಿಸಿದರು (ಉದಾ : 1 ಕೊರಿಂಥ 15:30,31 ನೋಡಿರಿ).

ಯಾವ ದುಷ್ಟತ್ವವು ಮರಣವನ್ನು ತಂದಿತೋ ಅದೇ ದುಷ್ಟತ್ವವು ಕಷ್ಟಸಂಕಟ, ಅನ್ಯಾಯ, ಬಡತನ ಮತ್ತು ದಬ್ಬಾಳಿಕೆ ಎಲ್ಲವುಗಳನ್ನು ತಂದಿತು. ಆದಾಗ್ಯೂ ಯೇಸುವಿನಿಂದ ಮತ್ತು ಮರಣದ ಮೇಲಿನ ಆತನ ವಿಜಯದಿಂದ ಇವುಗಳೆಲ್ಲವೂ ಒಂದು ದಿನ ಕೊನೆಯಾಗುತ್ತವೆ. ಕಡೆಯದಾಗಿ ನಾಶವಾಗುವ ಶತ್ರುವು ಮರಣವಾಗಿದೆ (1 ಕೊರಿಂಥ 15:26).

ಅಂತಿಮವಾಗಿ ನಾವು ಯಾರಿಗೆ ಸಹಾಯ ಮಾಡುತ್ತೇವೆಯೋ ಅದು ಮುಖ್ಯವಲ್ಲ. ಅವರೆಲ್ಲಾ ಅಂತಿಮವಾಗಿ ಸಾಯುತ್ತಾರೆ. ಯೇಸುಕ್ರಿಸ್ತನ ಮರಣ ಮತ್ತು ಪುನರುತ್ಥಾನದಲ್ಲಿ ಇತರರು ನಿರೀಕ್ಷೆ ಹೊಂದುವುದು ಎಷ್ಟು ಮುಖ್ಯ ಎಂಬುದರ ಬಗ್ಗೆ ಈ ಕಠೋರ ಸತ್ಯವು ನಮಗೆ ಏನನ್ನು ಬೋಧಿಸುತ್ತದೆ?

**ಬುಧವಾರ** **ಸೆಪ್ಟೆಂಬರ್ 11**

## ನ್ಯಾಯತೀರ್ಪಿನ ನಿರೀಕ್ಷೆ

ಪ್ರಸಂಗಿ 8:14ನ್ನು ಓದಿರಿ. ಇಲ್ಲಿ ಬರೆದಿರುವ ವಾಕ್ಯಗಳಲ್ಲಿ ಯಾವ ಬಗೆಯ ಕಠಿಣವಾದ ಮತ್ತು ಬಲಯುತವಾದ ವಾಸ್ತವತೆಯನ್ನು ಕಾಣುವಿರಿ?

ದಬ್ಬಾಳಿಕೆಯಿಂದ ಬಾಧಿತರಾಗಿರಿ. ಕಷ್ಟದಲ್ಲಿರುವಾಗ ದಬ್ಬಾಳಿಕೆ ಮತ್ತು ದುರಂತಗಳನ್ನು ತಮ್ಮ ಹಕ್ಕಿನಿಂದ ಸಹಿಸುವುದು ಬಹಳ ಕಷ್ಟಕರವಾಗಿದೆ. ಗಾಯ ಅಥವಾ ಅವಮಾನ ಇನ್ನೂ ಕಠಿಣವಾಗಿದ ಅರ್ಥಹೀನತೆಯ ದುಃಖವು ಅದರ ಆರಂಭದ ಹೊರೆಗಿಂತ ಭಾರವಾದುದು. ದಾಖಲೆಯಿಲ್ಲದ ಅಥವಾ ಅಂತಿಮ ನ್ಯಾಯ್ಯವಿಲ್ಲದ ಲೋಕವು ಅಸಂಬದ್ಧವಾದ ಕ್ರೂರತೆಯಲ್ಲಿ ಉನ್ನತವಾದುದು. ಒಬ್ಬ ಷಾಷಂಡಿ (ನಿರೀಶ್ವರವಾದಿ) 20ನೇ ಶತಮಾನದಲ್ಲಿ ಮಾನವನ ಪರಿಸ್ಥಿತಿಯಲ್ಲಿ ತಾನು ಏನನ್ನು ನಂಬಿದ್ದನೋ ಅದು ಕೇವಲ ಅಸಂಬದ್ಧತೆಯೆಂದು ಪ್ರಲಾಪ ಮಾಡಿದರೆ ಆಶ್ಚರ್ಯವಿಲ್ಲ.

ನ್ಯಾಯದ ನಿರೀಕ್ಷೆಯಿಲ್ಲದೇ, ತೀರ್ಪಿನ ನಿರೀಕ್ಷೆಯಿಲ್ಲದೇ, ವಿಷಯಗಳನ್ನು ಸರಿಪಡಿಸುವ ನಿರೀಕ್ಷೆಯಿಲ್ಲದೇ ಹೋದರೆ ಈ ಪ್ರಪಂಚವು ನಿಜವಾಗಿಯೂ ಅಸಂಬದ್ಧವಾದುದು.

ಪ್ರಸಂಗಿಯ ಕರೆಯು ಕಡೆಯು 8:14 ಮುಗಿಯುವುದಿಲ್ಲ. ಸಲೊಮೋನನು ತನ್ನ ವಿರೋಧಗಳ ಕೊನೆಗೆ ಕೂಡಲೇ ತಿರುವು ಪಡೆಯುತ್ತಾನೆ. ಅರ್ಥಹೀನ–

ವಾದುದರ ಬಗ್ಗೆ ಮಾಡಿದ ಪ್ರಲಾಪಗಳ ನಡುವೆ ಆತನು ಅವಶ್ಯಕವಾಗಿ ನುಡಿಯುತ್ತಾನೆ". "ನ್ಯಾಯವಿಚಾರಣೆಗೆ ದೇವರು ಪ್ರತಿಯೊಂದು ಕಾರ್ಯವನ್ನು ಗುರಿ ಮಾಡುವನು". ಹಾಗಿರುವುದರಿಂದ ಈವಾಗ ಪ್ರತಿಯೊಂದು, ಪ್ರತಿಯೊಬ್ಬರು ಮುಖ್ಯವಾಗುತ್ತಾರೆ.

ಪ್ರಸಂಗಿ 12:13,14 ನ್ನು ಓದಿರಿ. ನಾವು ಇಲ್ಲಿ ಮಾಡುವ ಪ್ರತಿಯೊಂದು ಕೆಲಸವು ಹೇಗೆ ಮುಖ್ಯವೆಂಬುದರ ಬಗ್ಗೆ ಇದು ಎನನ್ನು ಹೇಳುತ್ತದೆ?

ಒಬ್ಬನು ನಾವು ಜೀವಿಸುವ ಲೋಕ, ಜೀವನ, ದೇವರ ಮೂಲಸ್ವಭಾವದ ಬಗ್ಗೆ ಏನನ್ನು ನಂಬುತ್ತಾನೋ ಅದರೊಂದಿಗೆ ನ್ಯಾಯತೀರ್ಪಿನ ನಿರೀಕ್ಷೆ ಬರುತ್ತದೆ. ಸತ್ಯವೇದವು ನಾವು ದೇವರು ಸೃಷ್ಟಿಸಿ ಪ್ರೀತಿಸುವ ಲೋಕದಲ್ಲಿ ಜೀವಿಸುತ್ತಿದ್ದೇವೆ ಎಂದು ಒತ್ತು ನೀಡುತ್ತದೆ. ಆದರೆ ಲೋಕವು ತಪ್ಪಾಗಿ ನಡೆದ ಕಾರಣ ದೇವರು ತನ್ನ ಪುನರ್ ಸೃಷ್ಟಿ ಯೋಜನೆಯನ್ನು ಯೇಸುಕ್ರಿಸ್ತನ ಜೀವನ ಮತ್ತು ಮರಣ ಮೂಲಕ ನೆರವೇರಿಸುತ್ತಾನೆ.

ದೇವರ ನ್ಯಾಯತೀರ್ಪು ಈ ಲೋಕವನ್ನು ಸರಿಪಡಿಸುವುದಕ್ಕೆ ಮುಖ್ಯವಾದ ಅಂಶವಾಗಿದೆ. ಲೋಕದ ತಪ್ಪುಗಳನ್ನು ಅಂಗೀಕರಿಸುವ ತುದಿಯಲ್ಲಿದ್ದವರಿಗೆ ಯಾರು ಮೂಲೆಗುಂಪಾದರೋ, ಕ್ರೂರಿಯಾಗಿ ಮಾಡಲ್ಪಟ್ಟರೋ ದಬ್ಬಾಳಿಕೆಗೆ ಒಳಗಾದರೋ ಮತ್ತು ಶೋಷಣೆಗೆ ಗುರಿಯಾದರೋ ಅವರಿಗೆ ನ್ಯಾಯತೀರ್ಪಿನ ವಾಗ್ದಾನವು ಶುಭವರ್ತಮಾನವಾಗಿದೆ.

ಒಂದು ದಿನ ನಾವು ಕಲ್ಪಿಸಿಕೊಳ್ಳಲಾಗದ ವಿಧದಲ್ಲಿ ನಾವು ಬಹಳಷ್ಟು ಹಂಬಲಿಸುವ ನ್ಯಾಯತೀರ್ಪು ಅಂತಿಮವಾಗಿ ಬರುತ್ತದೆ ಎಂಬುದನ್ನು ಅರಿತುಕೊಳ್ಳುವುದರ ಅರ್ಥವೇನು?

**ಗುರುವಾರ** **ಸೆಪ್ಟೆಂಬರ್ 12**

## ಕಣ್ಣೀರಾಗಲಿ ಅಥವಾ ನೋವಾಗಲಿ ಇರುವುದಿಲ್ಲ

ಪ್ರಕಟನೆ 21:1–5 ಮತ್ತು 22:1–5ನ್ನು ಓದಿರಿ. ಇಲ್ಲಿರುವ ವರ್ಣನೆಯಂತೆ ಜೀವನವು ಹೇಗಿರುತ್ತದೆ ಎಂದು ಕಲ್ಪನೆ ಮಾಡುವುದಕ್ಕೆ ಸ್ವಲ್ಪ ಸಮಯ ಕಳೆಯಿರಿ.

ನಾವು ನೋವು ಮತ್ತು ಕಣ್ಣೀರಿಲ್ಲದ ಜೀವನವನ್ನು ಕಲ್ಪಿಸಿಕೊಳ್ಳಲು ಕಷ್ಟವಾಗುತ್ತದೆ ಏಕೆ?

ಪಾಪವು ಇನ್ನಿಲ್ಲದಾದಾಗ ನಮ್ಮ ಜೀವನವು ಪ್ರಶ್ನಾತೀತವಾಗಿ ಅದ್ಭುತವೂ, ಪ್ರಭಾವವೂ ಉಳ್ಳದ್ದಾಗಿರುತ್ತದೆ ಮತ್ತು ನಮಗೆ ಏನು ಕಾಯುತ್ತಿದೆ ಎಂಬುದನ್ನು ನಿಸ್ಸಂದೇಹವಾಗಿ ಪ್ರತಿಬಿಂಬಿಸುತ್ತದೆ.

ಈ ವಾಕ್ಯಗಳಲ್ಲಿರುವ ವರ್ಣನೆಯು ಬಹುತೇಕ ಏನಿರುತ್ತದೆ ಎಂದು ಹೇಳುವ ಹಾಗೆಯೇ ಅಲ್ಲಿ ಏನಿರಲು ಸಾಧ್ಯವಿಲ್ಲ ಎಂಬುದನ್ನೂ ತಿಳಿಸುತ್ತದೆ.

ನಾವು ತಿಳಿದಿರುವುದೆಲ್ಲಾ ಈ ಲೋಕದ್ದೇ ಆಗಿದ್ದರೆ, ಕಷ್ಟಸಂಕಟ, ಸಾವು, ನೋವು, ಭಯ, ಅನ್ಯಾಯ, ಬಡತನ, ಇವುಗಳಿಲ್ಲದ ಲೋಕವನ್ನು ಕಲ್ಪಿಸಿಕೊಳ್ಳುವುದು ಕಷ್ಟಕರವಾಗಿರುತ್ತದೆ. ಇವುಗಳೆಲ್ಲವು ಇಲ್ಲದಿರುವುದನ್ನು ಮಾತ್ರವೇ ಹೇಳದೆ ಈ ವರ್ಣನೆಯು ವೈಯಕ್ತಿಕ ಸ್ಪರ್ಶವನ್ನು ಸಹಾ ಸೇರಿಸುತ್ತದೆ. "ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು" (ಪ್ರಕ 21:4). ರಕ್ಷಣೆ ಹೊಂದಿದ ಸಂದರ್ಭದಲ್ಲಿ, ಮಾನವ ಚರಿತ್ರೆಯದಾದ್ಯಂತ ಯಾರು ಪಾಡುಪಟ್ಟಿರುತ್ತಾರೋ ಅವರ ಮೇಲೆ ದೇವರ ಕನಿಕರ ಪರಾಕಾಷ್ಠತೆಯನ್ನು ಮುಟ್ಟುವುದನ್ನು ಒಂದೇ ವಾಕ್ಯವು ತಿಳಿಸುತ್ತದೆ. ಇವುಗಳಿಗೆಲ್ಲಾ ಅಂತ್ಯ ತರುವುದು ಮಾತ್ರವಲ್ಲ ತಾನೇ ವೈಯಕ್ತಿಕವಾಗಿ ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುತ್ತಾನೆ. ಅನೇಕ ವಿಧದಲ್ಲಿ ಪಾಪದ ಬಲಿಪಶುಗಳಾದ ನಾವು ಸ್ವಸ್ಥರಾಗುವ ಸುಳಿವನ್ನು ಪ್ರಕಟನೆಯ ಪುಸ್ತಕದಲ್ಲಿ ಕಾಣಬಹುದು. ಜೀವ ವೃಕ್ಷವನ್ನು ವರ್ಣಿಸುತ್ತಾ ಯೋಹಾನನು- "ಆ ಮರದ ಎಲೆಗಳು ಜನಾಂಗದವರನ್ನು ವಾಸಿ ಮಾಡುವುದಕ್ಕೆ ಪ್ರಯೋಜನವಾಗಿದೆ" (ಪ್ರಕಟನೆ 22:2) ಎಂದು ಹೇಳುತ್ತಾನೆ. ಯಾವುದು ಮಾನವತೆಯೋ, ಭಾವಿಸುವುದು, ಅನುಭವಿಸುವುದು, ಸಾಕ್ಷಿ ಕೊಡುವುದು ಇವುಗಳ ಬಗ್ಗೆ ಜ್ಞಾನವನ್ನು ಮತ್ತೂ ಕನಿಕರವನ್ನು ದೇವರು ತೋರಿಸುತ್ತಾನೆ. ಈ ಲೋಕದ ಪುನರ್ ಸೃಷ್ಟಿಯ ಯೋಜನೆಯು ಮರುಸ್ಥಾಪನೆ ಮತ್ತು ನಮ್ಮೆಲ್ಲರನ್ನೂ ಗುಣಪಡಿಸುವುದನ್ನು ಒಳಗೊಂಡಿದೆ.

ಅಲ್ಲಿಯ ತನಕ ನಾವು ಕ್ರಿಸ್ತನಲ್ಲಿ ಏನಾಗಬಲ್ಲೆವೋ ಅದನ್ನು ಬಯಸುತ್ತೇವೆ. ನಮ್ಮ ಪಾತ್ರವು ಎಷ್ಟೇ ಚಿಕ್ಕದಾಗಿದ್ದರೂ ತಪ್ಪಿನಿಂದ ಕೂಡಿದ್ದಾಗಿದ್ದರೂ ಅದನ್ನು ನಿರ್ವಹಿಸುತ್ತಾ ಅಂದರೆ ಯಾರಿಗೆ ನಮ್ಮ ಸಹಾಯದ ಅಗತ್ಯವಿದೆಯೋ ಅವರಿಗೆ ಕರುಣೆಯ ಮಾತುಗಳಾಗಲೀ ಒಂದು ಹೊತ್ತಿನ ಊಟವಾಗಲೀ ವೈದ್ಯಕೀಯ ನೆರವಾಗಲೀ ಬಟ್ಟೆಯಾಗಲೀ ಸಲಹೆಯಾಗಲಿ ಏನನ್ನಾದರೂ ಸರಿಯೆ ನಾವು ಮಾಡುವುದಕ್ಕಾಗುತ್ತದೋ ಅದನ್ನು ಸ್ವಪರಿತ್ಯಾಗ, ಸ್ವನಿರಾಕರಣೆ, ಸ್ವತ್ಯ ಎನ್ನಬಹುದು. ಇದನ್ನು ಯೇಸುಕ್ರಿಸ್ತನು ಇಲ್ಲಿದ್ದಾಗ ತೋರಿಸಿದ್ದ ಪ್ರೀತಿಯಿಂದ ಮಾಡಬೇಕು.

ನಿಶ್ಚಯವಾಗಿ ಈ ಲೋಕವು ನಾವು ಎಷ್ಟೇ ಪರಿಶ್ರಮ ಹಾಕಿದರೂ ಕೆಟ್ಟತನದಿಂದ ಹೆಚ್ಚು ಕೆಟ್ಟತನಕ್ಕೆ ಸಾಗುತ್ತಾ ಹೋಗುತ್ತದೆ. ಯೇಸುಕ್ರಿಸ್ತನಿಗೆ ಇದು ಗೊತ್ತು ಆದಾಗ್ಯೂ ಈ ಸತ್ಯವು ಇತರರಿಗೆ ಸೇವೆ ಮಾಡದಂತೆ ಅವನನ್ನು ತಡೆಯುವುದಿಲ್ಲ. ಹಾಗೆಯೇ ನಮ್ಮನ್ನು ತಡೆಯಬಾರದು.

**ಶುಕ್ರವಾರ** **ಸೆಪ್ಟೆಂಬರ್ 13**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರು Called to reach a higher standard PP 309-322. Acts of the Apostales ಪುಸ್ತಕ "Desolution of the Earth" ಅಧ್ಯಾಯದಲ್ಲಿ ಪುಟ 653–661. ಮಹಾಹೋರಾಟ ಪುಸ್ತಕ.

ತನ್ನ ಜನರಲ್ಲಿ ಸೆರೆಯಾದವರನ್ನು ದೇವರು ತನ್ನ ಸ್ವರದಿಂದ ತಿರುಗಿಸುತ್ತಾನೆ. ಮಹಾಹೋರಾಟದಲ್ಲಿ ಸರ್ವವನ್ನು ಕಳೆದುಕೊಂಡವರಲ್ಲಿ ಭಯಂಕರ ಜಾಗ್ರತೆ ಉಂಟಾಗುತ್ತದೆ. ಸೈತಾನನ ವಂಚನೆಗಳಿಂದ ಕುರುಡಾದವರು ತಮ್ಮ ಪಾಪಗಳನ್ನು ಸಮರ್ಥಿಸಿಕೊಳ್ಳುತಾರೆ. ಅಲ್ಪವಾಗಿ ಆಶೀರ್ವಾದಿಸಲ್ಪಟ್ಟವರ ಮೇಲೆ ಶ್ರೀಮಂತರು ತಮ್ಮ ಮೇಲರಿಮೆಯಿಂದ ಗರ್ವಪಡುತ್ತಾರೆ. ಆದರೆ ಇವರು ದೇವರ ಆಜ್ಞೆಗಳನ್ನು ಮೀರಿ ಹಣ ಸಂಪಾದಿಸುತ್ತಾರೆ. ಅವರು ಬಡವರಿಗೆ ಆಹಾರವನ್ನು ಬೆತ್ತಲೆಯಾದವರಿಗೆ ಬಟ್ಟೆಯನ್ನು, ನ್ಯಾಯವನ್ನು ಆಚರಿಸುವುದು, ಕರುಣೆಯಲ್ಲಿ ಆಸಕ್ತನಾಗಿರುವುದು ಇವುಗಳನ್ನು ಅಲಕ್ಷಿಸುತ್ತಾರೆ.

ಇವರು ಲೋಕದ ಐಶ್ವರ್ಯಕ್ಕಾಗಿಯೂ, ಭೋಗಕ್ಕಾಗಿಯೂ ತಮ್ಮ ಆತ್ಮಗಳನ್ನು ಮಾರಿಕೊಂಡು ದೇವರ ವಿಷಯದಲ್ಲಿ ಶ್ರೀಮಂತರಾಗುವುದಕ್ಕೆ ಇಷ್ಟ ಪಟ್ಟು ಅದರ ಪ್ರತಿಫಲವೇನೆಂದರೆ ಅವರು ವಿಫಲರಾಗುವುದು. ಅವರ ಸಂತೋಷ ಅಪಮಾನಕ್ಕೆ ತಿರುಗುತ್ತದೆ. ಅವರ ಬೆಳ್ಳಿ, ಚಿನ್ನಗಳಿಗೆ ನುಸಿಹಿಡಿಯುತ್ತದೆ. ಎಲೆನ್ ಜಿ ವೈಟಮ್ಮನವರ "ಮಹಾ ಹೋರಾಟ" ಪುಸ್ತಕದಲ್ಲಿ ಪುಟ 654.

"ಮಹಾಹೋರಾಟವು ಕೊನೆಗೊಳ್ಳುತ್ತದೆ. ಪಾಪವಾಗಲಿ ಪಾಪಿಗಳಲ್ಲಿ ಇರುವುದಿಲ್ಲ. ಇಡೀ ಜಗತ್ತೇ ಶುದ್ಧವಾಗಿರುತ್ತದೆ. ಸಾಮರಸ್ಯದ ಮತ್ತು ಸಂತೋಷದ ಒಂದು ನಾಡಿ ಅಗಾಧ ಸೃಷ್ಟಿಯನ್ನು ಮಿಡಿಯುತ್ತದೆ.

ಸಮಸ್ತವನ್ನೂ ಸೃಷ್ಟಿಸಿದವರಿಂದ ಜೀವ ಬೆಳಕು ಮತ್ತು ಸಂತೋಷ ಹರಿಸುತ್ತದೆ. ಸಣ್ಣ ಅಣುವಿನಿಂದ ಹಿಡಿದು ದೊಡ್ಡ ಲೋಕದವರ್ಗೆ, ಸಮಸ್ತ ನಿರ್ಜೀವ ಸಜೀವವಸ್ತುಗಳು, ಗ್ರಹಣರಹಿತ ಸೌಂದರ್ಯ, ಪರಿಪೂರ್ಣ ಆನಂದ ದೇವರ ಪ್ರೀತಿಯನ್ನೇ ಘೋಷಿಸುತ್ತದೆ. ಎಲೆನ್ ಜಿ ವೈಟಮ್ಮನವರ "ಮಹಾಹೋರಾಟ" ಪುಟ 678.

## ಚರ್ಚಿಸಬೇಕಾದ ಪ್ರಶ್ನೆಗಳು

1. ಈ ವಾರದಲ್ಲಿ ಏನನ್ನು ಅಧ್ಯಯನ ಮಾಡಿದ್ದೀರಿ? ಆ ಪಾಠವು ಇಲ್ಲಿ ಮತ್ತೂ ಮುಖ್ಯವಾಗುತ್ತದೆ ಹೇಗೆ? ದೇವರು ಈ ಲೋಕವನ್ನು ನಾಶ ಮಾಡುವುದರಿಂದ ಇದರ ಬಗ್ಗೆ ನಾವು ಚಿಂತಿಸಬೇಕಿಲ್ಲ ಎಂಬ ನಂಬಿಕೆಯನ್ನು ಇದರ ಜೊತೆಗೆ ಹೋಲಿಸಿರಿ. ಹೊಸ ಸೃಷ್ಟಿಯ ವಾಗ್ದಾನದ ಸತ್ಯವನ್ನು ಕೊರತೆಯಲ್ಲಿರುವವರಿಗೆ ಉಪಯೋಗಿಸುವುದಕ್ಕೆ ಹೇಗೆ ಜಾಗ್ರತೆಯಾಗಿರಬೇಕು? ಏಷ್ಟೇ ಕೆಟ್ಟ ಸ್ಥಿತಿ ಬಂದಾಗ್ಯೂ ಈ ಸತ್ಯವನ್ನು ಇತರರಿಗೆ ಶೋಷಣೆ ಉಪಯೋಗಿಸುವವರಲ್ಲಿ ನಾವೊಬ್ಬರಾಗದಂತೆ ಎಚ್ಚರ ವಹಿಸುವುದು ಹೇಗೆ?

2. ಯೇಸುಕ್ರಿಸ್ತನು ಬರುವ ಕಾಲವು ಹತ್ತಿರವಾಗುತ್ತಿದ್ದಂತೆ ಕೆಟ್ಟತನ ತೊಡಕುಗಳು, ಕಷ್ಟಗಳು ಇನ್ನೂ ಹೆಚ್ಚಾಗುತ್ತವೆ ಎಂದು ಅಡ್ವೆಂಟಿಸ್ಟರ ಪ್ರವಾದನೆಯ ಜ್ಞಾನವು ನಿರೀಕ್ಷಿಸುತ್ತದೆ. ಹಾಗೆ ಆದಾಗಲೆಲ್ಲಾ ನಾವು ಮತ್ತಾಯ 24ನ್ನು

ನೋಡುತ್ತೇವೆ. ಮತ್ತಾಯ 25ನೇ ಅಧ್ಯಾಯವನ್ನು ಪರಿಶೀಲಿಸಿದ ನಂತರ ಈ ದುರಂತಗಳನ್ನು ಹೇಗೆ ಆಲೋಚಿಸುತ್ತೇವೆ?

**ಸಾರಾಂಶ :** ನಮ್ಮ ದೇವರು "ದುಷ್ಟತ್ವವನ್ನು" ಎಂದೆಂದಿಗೂ ಇರುವುದಕ್ಕೆ ಬಿಡುವುದಿಲ್ಲ. ಸತ್ಯವೇದದ ಮಹಾನಿರೀಕ್ಷೆ ಏನೆಂದರೆ ಯೇಸುಕ್ರಿಸ್ತನು ಎರಡನೇ ಬರೋಣದಲ್ಲಿ ದುಷ್ಟತ್ವಕ್ಕೆ ಕೊನೆ ತರುತ್ತಾನೆ. ಅನ್ಯಾಯವನ್ನು ಸರಿಪಡಿಸಿ ಹೊಸ ಲೋಕವನ್ನು ಸೃಷ್ಟಿಸುತ್ತಾನೆ. ಯೇಸುಕ್ರಿಸ್ತನ ಪುನರುತ್ಥಾನದ ಮೇಲೆ ಕಟ್ಟುವಾಗ ಈ ನಿರೀಕ್ಷೆಯು ನಮ್ಮನ್ನು ಇಂದು ಪರಿವರ್ತನೆ ಪಡಿಸುತ್ತದೆ ಮತ್ತು ಕಾಯುವಾಗ ಇತರರಿಗೆ ಮತ್ತು ದೇವರಿಗೆ ಸೇವೆ ಮಾಡುವ ಧೈರ್ಯವನ್ನು ನೀಡುತ್ತದೆ.